## **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಶಹಾಬಾದ**

**ಸಿ.ಸಿ.ನಂ.900/2022**

ಫಿರ್ಯಾದಿಃ ಕರ್ನಾಟಕ ರಾಜ್ಯ ಶಹಾಬಾದ ಪೋಲೀಸ ಠಾಣೆ

ವಿರುದ್ಧ

ಆರೋಪಿಃ

ಮಹಿಬೂಬಸಾಬ ತಂದೆ ಗೂಡಸಾಬ ದೊಡ್ಮನಿ,
ವಃ 43 ವರ್ಷ, ಉಃ ಡ್ರೈವರ್
ಸಾಃ ಎಮ್.ಎಸ್.ಕೆ ಮೀಲ ಕಲಬುರಗಿ.

## **ಆಪಾದನೆ**

ದಿನಾಂಕಃ 20.04.2022 ರಂದು ಬೆಳಿಗ್ಗೆ 10.20 ಗಂಟೆ ಸುಮಾರಿಗೆ ಶಹಾಬಾದ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕಲಬುರಗಿ ದಿಂದ ಯಾದಗಿರಗೆ ಹೋಗುವ ರಾಷ್ಟ್ರೀಯ ಹೆದ್ದಾರಿ 150 ರ ಮಾಲಗತ್ತಿ್ಸ ಗ್ರಾಮದ ಸಣ್ಣ ಬೀಡ ಹತ್ತಿರ ಪಾಶ್ವನಾಥ ಗೊಂಡಗ ರವರ ಹೊಲದ ಹತ್ತಿರ ರೋಡಿನ ಮೇಲೆ, ಚಾಸಾ-1 ರವರ ಗಂಡನಾದ ರವಿಚಂದ್ರ ತಂದೆ ಶ್ರೀಮಂತ ಕ್ಷತ್ರಿಯ ಮೊಟಾರ ಸೈಕಲ ನಂ.ಕೆಎ-32/ಇವಾಯ-8141 ನೇದ್ದನ್ನು ಚಲಾಯಿಸಿಕೊಂಡು ನೆಲೊಗಿಯಿಂದ ರಾವೂರ ಕಡೆಗೆ ಮಾಲಗತ್ತಿ ಗ್ರಾಮದ ಸಣ್ಣ ಬ್ರಿಡ್ಜ ಹತ್ತಿರ ರಾವೂರ ಕಡೆಯಿಂದ ಹೋಗುವಾಗ, ಆರೋಪಿಯಾದ ನೀವು ನಿಮ್ಮ ವಶದಲ್ಲಿದ್ದ ಕಾರ ನಂ.ಕೆಎ-33/ಎಮ್-0786 ನೇದ್ದನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಮೊಟಾರ ಸೈಕಲಕ್ಕೆ ಒಮ್ಮೆಲೆ ಡಿಕ್ಕಿಪಡಿಸಿ ಅಪಘಾತಪಡಿಸಿದ್ದು. ಆ ಮೂಲಕ ಭಾ.ದಂ.ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

2. ಈ ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಆರೋಪಿಯಾದ ನೀವು ನಿಮ್ಮ ವಶದಲ್ಲಿದ್ದ ಕಾರ ನಂ.ಕೆಎ-33/ಎಮ್-0786 ನೇದ್ದನ್ನು ಅತೀ ವೇಗ ಮತ್ತು ಅಲಕ್ಷತನದಿಂದ

ಚಲಾಯಿಸಿಕೊಂಡು ಬಂದು ರವಿಚಂದ್ರ ಇತನು ಚಲಾಯಿಸುವ ಮೋಟಾರ ಸೈಕಲಕ್ಕೆ ಒಮ್ಮೆಲೆ ಕಿಡ್ಕಿ ಪಡಿಸಿದಾಗ ಆಗ ರವಿಚಂದ್ರ ಇತನು ಮೋಟಾರ ಸೈಕಲದೊಂದಿಗೆ ಕೆಳಗೆ ಬಿದ್ದಾಗ ಬಲಗಾಲಿಗೆ ಬಲಗೈಗೆ, ಗದ್ದಕ್ಕೆ ಭಾರಿ ಒಳಪಟ್ಟಾಗಿ ರಕ್ತಗಾಯವಾಡಿದ್ದು ಮತ್ತು ಮೈಕೈಗೆ ಒಳಪೆಟ್ಟಾಗಿ ರಕ್ತಗಾಯವಾಡಿದ್ದು ನಂತರ ರವಿಚಂದ್ರ ರವರಿಗೆ ಉಪಚಾರ ಕುರಿತು ಕಲಬುರಗಿಯ ಮಣ್ಣೂರ ಅಸ್ಪತ್ರೆಯಲ್ಲಿ ಸೇರಿಕೆ ಮಾಡಿದಾಗ ಉಪಚಾರ ಹೊಂದುತ್ತಾ ಉಪಚಾರ ಫಲೀಸದೆ ದಿಃ 20.04.2022 ರಂದು 12.30 ಪಿ.ಎಮ್ ಕ್ಕೆ ಮೃತ ಪಟ್ಟಿದ್ದು, ಆ ಕಾರಣ ನೀವು ಭಾ.ದಂ.ಸಂ. ಕಲಂ 304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀನು ನಿನ್ನ ಕಾರ ನಂ.ಕೆಎ-33/ಎಮ್-0786 ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿ ಅಪಘಾತ ಪಡಿಸಿ, ನಂತರ ಸಮೀಪದ ಪೋಲೀಸರಿಗೆ ಅಪಘಾತದ ಬಗ್ಗೆ ಸೂಚನೆಯನ್ನು ಕೊಡದೆ ಸ್ಥಳದಿಂದ ಓಡಿಹೋಗಿದ್ದು, ಕಾರಣ ನೀನು ಮೋಟಾರು ವಾಹನ ಕಾಯ್ದೆ ಕಲಂ 187 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಸದರಿ ಆರೋಪವು ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು, ಈ ನ್ಯಾಯಾಲಯದಿಂದ ಸದರಿ ಆರೋಪಕ್ಕೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

# ಆರೋಪಿಯ ಹೇಳಿಕೆ

ಪ್ರಶ್ನೆ-1 : ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದಆರೋಪಣೆಯನ್ನು ಅರ್ಥಮಾಡಿಕೊಂಡಿದ್ದಿರಾ?

ಉ :

ಪ್ರಶ್ನೆ-2 :ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ :

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತನ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕಃ*25.06.2025*

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಶಹಾಬಾದ